**ಕರ್ನಾಟಕ ಸರ್ಕಾರದ ನಡವಳಿ**

**ವಿಷಯ:** ವಿಕಲ ಚೇತನ (ಅಂಗವಿಕಲ) ರಾಜ್ಯ ಸರ್ಕಾರಿ ನೌಕರರು, ಮೋಟಾರುಚಾಲಿತ/ಯಾಂತ್ರಿಕ (ಮೆಕ್ಯಾನಿಕಲ್) ವಾಹನಗಳನ್ನು ಖರೀದಿಸಲು ನೀಡಲಾಗುತ್ತಿರುವ ಸಹಾಯಧನವನ್ನು ಪರಿಷ್ಕರಿಸುವ ಬಗ್ಗೆ.

**ಓದಲಾಗಿದೆ:** ದಿನಾಂಕ 10.06.2013ರ ಸರ್ಕಾರಿ ಆದೇಶ ಸಂಖ್ಯೆ: ಎಫ್‌ಡಿ 12 ಎಸ್‌ಆರ್‌ಪಿ 2012(XI)

**ಪ್ರಸ್ತಾವನೆ:**

2011ರ ಅಧಿಕಾರಿ ವೇತನ ಸಮಿತಿಯ ಶಿಫಾರಸ್ಸಿನಂತೆ, ಮೇಲೆ ಓದಲಾದ ದಿನಾಂಕ 10.06.2013ರ ಸರ್ಕಾರಿ ಆದೇಶದಲ್ಲಿ ಅಂಗವಿಕಲತೆಯುಳ್ಳ (ವಿಕಲ ಚೇತನ) ಸರ್ಕಾರಿ ನೌಕರರು ಕಛೇರಿಗೆ ಹೋಗಿ ಬರಲು ಬಳಸುವ ಮೋಟಾರು ಚಾಲಿತ/ಯಾಂತ್ರಿಕ (ಮೆಕಾನಿಕಲ್) ವಾಹನಗಳನ್ನು ಖರೀದಿಸಲು ಸಹಾಯವಾಗಲೆಂದು, ಅಂತಹ ನೌಕರರು ಖರೀದಿಸುವ ವಾಹನದ ಬೆಲೆಯ ಶೇ.25ರಷ್ಟನ್ನು ಗರಿಷ್ಠ ರೂ.25,000/-ಗಳ ಮಿತಿಗೊಳಪಟ್ಟು ಹಿಂಬರಿಸಲು ಆದೇಶವನ್ನು ಹೊರಡಿಸಲಾಗಿರುತ್ತದೆ. ಈ ಸೌಲಭ್ಯವು ವಿಶೇಷ ಚೇತನ ಸಿಬ್ಬಂದಿಗಳ ಸೇವಾ ಅವಧಿಯಲ್ಲಿ ಒಂದು ಬಾರಿ ಮಾತ್ರ ಲಭ್ಯವಾಗತಕ್ಕದ್ದಾಗಿರುತ್ತದೆ.

ವಾಹನಗಳ ಬೆಲೆ ಏರಿಕೆಯನ್ನು ಗಮನದಲ್ಲಿರಿಸಿದ 6ನೇ ರಾಜ್ಯ ವೇತನ ಆಯೋಗವು ಯಾಂತ್ರೀಕೃತ/ಮೋಟಾರು ಚಾಲಿತ ವಾಹನಗಳ ಖರೀದಿಗೆ ಸರ್ಕಾರವು ಪ್ರಸ್ತುತ ನೀಡುತ್ತಿರುವ ವಾಹನದ ಬೆಲೆಯ ಶೇಕಡ 25ರಷ್ಟು ಸಹಾಯಧನವನ್ನು ಪರಿಷ್ಕರಿಸಲು ಶಿಫಾರಸ್ಸು ಮಾಡಿರುತ್ತದೆ.

6ನೇ ರಾಜ್ಯ ವೇತನ ಆಯೋಗದ ಶಿಫಾರಸ್ಸನ್ನು ಸರ್ಕಾರವು ಒಪ್ಪಿರುತ್ತದೆ ಮತ್ತು ಈ ಕೆಳಕಂಡಂತೆ ಆದೇಶವನ್ನು ಹೊರಡಿಸಿದೆ.

**ಸರ್ಕಾರಿ ಆದೇಶ ಸಂಖ್ಯೆ: ಎಫ್‌ಡಿ 24 ಎಸ್‌ಆರ್‌ಪಿ 2018(VIII)**
**ಬೆಂಗಳೂರು, ದಿನಾಂಕ 11ನೇ ಜನವರಿ 2019**

ವಿಶೇಷ ಚೇತನ (ಅಂಗವೈಕಲ್ಯತೆ ಹೊಂದಿರುವ) ರಾಜ್ಯ ಸರ್ಕಾರಿ ನೌಕರರು ಖರೀದಿಸುವ ಮೋಟಾರು ಚಾಲಿತ/ಯಾಂತ್ರೀಕೃತ (ಮೆಕ್ಯಾನಿಕಲ್) ವಾಹನಗಳಿಗೆ ನೀಡಲಾಗುತ್ತಿದ್ದ ಸಹಾಯಧನವನ್ನು ವಿಶೇಷ ವಾಹನದ ಬೆಲೆಯ ಶೇ.30ರಷ್ಟು ಗರಿಷ್ಠ ರೂ.40,000/-ಗಳ ಮಿತಿಗೊಳಪಟ್ಟು **1ನೇ ಜನವರಿ 2019** ರಿಂದ ಜಾರಿಗೆ ಬರುವಂತೆ ಪರಿಷ್ಕರಿಸಲು ಸರ್ಕಾರವು ಹರ್ಷಿಸುತ್ತದೆ. ಈ ಸೌಲಭ್ಯದ ಮಂಜೂರಾತಿಯು ಈ ಕೆಳಕಂಡ ಷರತ್ತು ಮತ್ತು ನಿಬಂಧನೆಗಳ ಪೂರೈಕೆಗೊಳಪಟ್ಟಿರುತ್ತದೆ.



Kiran Raghupathi

(i) ಈ ಸೌಲಭ್ಯವು ಕನಿಷ್ಠ ಶೇ.40 ಮತ್ತು ಅದಕ್ಕೂ ಹೆಚ್ಚಿನ ಅಂಗವೈಕಲ್ಯತೆ (ಚಲನವಲನ ವೈಕಲ್ಯತೆ) ಹೊಂದಿರುವ ವಿಶೇಷ ಚೇತನ ಸಿಬ್ಬಂದಿಗಳಿಗೆ ಮಾತ್ರ ಲಭ್ಯವಾಗತಕ್ಕದ್ದು.

(ii) ವಿಶೇಷ ಚೇತನ ಸಿಬ್ಬಂದಿಗಳು ಅವರ ಚಲನವಲನ ವೈಕಲ್ಯತೆಯ ದೃಢೀಕರಣದ ಬಗ್ಗೆ ವೈದ್ಯಕೀಯ ಮಂಡಳಿಯಿಂದ ಪಡೆದ ಪ್ರಮಾಣ ಪತ್ರವನ್ನು ಇಲಾಖಾ ಮುಖ್ಯಸ್ಥರಿಗೆ ಸಲ್ಲಿಸತಕ್ಕದ್ದು.

(iii) ಈ ಉದ್ದೇಶಕ್ಕಾಗಿ ಖರೀದಿಸುವ ವಿಶೇಷ ವಾಹನದ ಬಿಲ್ಲನ್ನು ಇಲಾಖಾ ಮುಖ್ಯಸ್ಥರಿಗೆ ಸಲ್ಲಿಸತಕ್ಕದ್ದು.

(iv) ಈ ಸೌಲಭ್ಯವು ಸೇವೆಯಲ್ಲಿ ಒಂದು ಬಾರಿ ಮಾತ್ರ ಲಭ್ಯವಾಗತಕ್ಕದ್ದು. ಈ ಮೊದಲು ಈ ಸೌಲಭ್ಯವನ್ನು ಪಡೆದವರು ಪರಿಷ್ಕೃತ ದರದಲ್ಲಿ ಈ ಸೌಲಭ್ಯವನ್ನು ಪುನ: ಪಡೆಯಲು ಅರ್ಹರಿರುವುದಿಲ್ಲ.

2. ಈ ಸೌಲಭ್ಯವನ್ನು ಮಂಜೂರು ಮಾಡಲು ನೇಮಕಾತಿ ಪ್ರಾಧಿಕಾರವು ಸಕ್ಷಮ ಪ್ರಾಧಿಕಾರಿಯಾಗಿರುತ್ತದೆ.

**ಕರ್ನಾಟಕ ರಾಜ್ಯಪಾಲರ ಆದೇಶಾನುಸಾರ**
**ಮತ್ತು ಅವರ ಹೆಸರಿನಲ್ಲಿ**

**(ಡಿ.ಎಸ್.ಜೋಗೋಜೆ)**
**ಸರ್ಕಾರದ ಉಪ ಕಾರ್ಯದರ್ಶಿ**
**ಆರ್ಥಿಕ ಇಲಾಖೆ (ಸೇವೆಗಳು-2)**

ಸಂಕಲನಕಾರರು, ಕರ್ನಾಟಕ ಗೆಜೆಟ್, ಮುಂದಿನ ಪ್ರಕಟಣೆಯಲ್ಲಿ ಪ್ರಕಟಿಸುವುದಕ್ಕಾಗಿ ಹಾಗೂ 50 ಪ್ರತಿಗಳನ್ನು ಆರ್ಥಿಕ ಇಲಾಖೆಗೆ ಸರಬರಾಜು ಮಾಡಲು.

**ಇವರಿಗೆ:**

1. ಸರ್ಕಾರದ ಮುಖ್ಯ ಕಾರ್ಯದರ್ಶಿ/ಅಪರ ಮುಖ್ಯ ಕಾರ್ಯದರ್ಶಿಗಳು.
2. ಸರ್ಕಾರದ ಎಲ್ಲಾ ಪ್ರಧಾನ ಕಾರ್ಯದರ್ಶಿಗಳು/ ಕಾರ್ಯದರ್ಶಿಗಳು.
3. ರಾಜ್ಯಪಾಲರ ವಿಶೇಷ ಕಾರ್ಯದರ್ಶಿ, ರಾಜಭವನ, ಬೆಂಗಳೂರು.
4. ಪ್ರಧಾನ ಮಹಾಲೇಖಪಾಲರು (G&SSA), ಕರ್ನಾಟಕ, ಹೊಸ ಕಟ್ಟಡ, ಆಡಿಟ್ ಭವನ, (ಪಿ.ಬಿ. ನಂ.5398) ಬೆಂಗಳೂರು.
5. ಪ್ರಧಾನ ಮಹಾಲೇಖಪಾಲರು (E&RSA), ಕರ್ನಾಟಕ, ಹೊಸ ಕಟ್ಟಡ, ಆಡಿಟ್ ಭವನ, (ಪಿ.ಬಿ. ನಂ.5398) ಬೆಂಗಳೂರು.
6. ಪ್ರಧಾನ ಮಹಾಲೇಖಪಾಲರು (ಲೆಕ್ಕಗಳು ಮತ್ತು ಹಕ್ಕುಗಳು), ಕರ್ನಾಟಕ, ಪಾರ್ಕ್‌ಹೌಸ್‌ರಸ್ತೆ, (ಪಿ.ಬಿ. ನಂ.5329) ಬೆಂಗಳೂರು.

..3

Kiran Raghupathi